ಅಂಗಡಿಗೆ ಸೇರಿಸಿಕೊಳ್ಳುವ ವಿಚಾರಕ್ಕೆ ಸೇಟ್ ಒಪ್ಪಿದಂತೆ ಮಾಡಿದ್ದ. ಅಷ್ಟರಲ್ಲಿ ಈ ಮಹಾಮಾರಿ ಎರಗಿತ್ತು. ನೋಡನೋಡುತ್ತ ಖಾಸಗಿ ಕಚೇರಿ, ಅಂಗಡಿ, ಹೋಟೆಲು ಅಂತ ಎಲ್ಲರ ಜೀವನವನ್ನು ಕಸಿದುಬಿಟ್ಟಿತ್ತು. ಊರಲ್ಲಿ ಎರಡು ಜನ ಸತ್ತರು. ಖಾನಾವಳಿ ಈಸ್ವರಪ್ಪನ ಅಪ್ಪ ಬಸಣ್ಣನಿಗೆ ಜ್ವರ ಬಂದು ಮನೆಯಲ್ಲೆ ಒಳಗಿರಿಸಿಕೊಂಡು ಔಷಧ ಮಾಡುತ್ತಿದ್ದರು. ಇದ್ದಕ್ಕಿದ್ದಂತೆ ಬೆಳಗ್ಗೆ ಸರಕಾರಿ ವ್ಯಾನು ಮನೆಯೆದುರು ಬಂದು ನೆತ್ತಿಯಿಂದ ಪಾದದವರೆಗೆ ಮುಸುಕು ಹಾಕಿಕೊಂಡ ಸಿಬ್ಬಂದಿ ಜಬರದಸ್ತಿ ವ್ಯಾನಿಗೆ ಹಾಕಿಕೊಂಡು ಹೋದರು. ವಾರದಮೇಲೆ ಕಲಬುರ್ಗಿ ಆಸ್ಪತ್ರೆಯಲ್ಲಿ ಬಸಣ್ಣ ಸತ್ತ ಅಂತ ಸುದ್ದಿ ಬಂತು. ಅವನ ಹೆಣ ಏನಾಯ್ತು ಅಂತ ಮನೆಯವರಿಗೂ ಸರಿ ಗೊತ್ತಾಗಲಿಲ್ಲ. ಬಸಪ್ಪನ ಜ್ವರದ ವಿಷಯ ಸಿಬ್ಬಂದಿಗೆ ತಿಳಿಸಿದ ಗುಮಾನಿ ಮೇಲೆ ರೇಷನ್ನಂಗಡಿ ಸಣ್ಣಪ್ಪನ ಮನೆಯವರಿಗೂ ಈಸ್ವರಪ್ಪನ ಮನೆಯವರಿಗೂ ರಸ್ತೆಯಲ್ಲಿ ಭಯಂಕರ ಜಗಳವಾಗಿ ಸಣ್ಣಪ್ಪನಿಗೆ ಹೊಡೆದರು. ಸಣ್ಣಪ್ಪ ಅಂಗಡಿ ಬಂದುಮಾಡಿ ರೇಷನ್ನು ಲೂಟಿ ಮಾಡಿದರು ಅಂತ ದೂರು ಕೊಟ್ಟ. ಪೊಲೀಸು ಕೇಸಾಗಿ ಎರಡು ಮನೆಯವರಿಗೂ ಶಾಶ್ವತ ವೈರವಾಯಿತು. ಖಾನಾವಳಿ ಬಾಗಿಲು ಮುಚ್ಚಿ ಕಾಶವ್ವಗೆ ಕೆಲಸವಿರಲಿಲ್ಲ. ಮುಖಕ್ಕೆ ಮಾಸ್ಕ್ ಹಾಕಿಕೊಂಡರೂ ಹೆದರುವ ಸ್ಥಿತಿಯಲ್ಲಿ ದಿನಸಿ ಔಷಧ ಬಿಟ್ಟು ಉಳಿದ ಅಂಗಡಿ ಬಾಗಿಲು ಮುಚ್ಚಿದರು. ಬರಗಾಲಕ್ಕಿಂತ ಭೀಕರವಾಗಿತ್ತು ಅದರ ಪ್ರಹಾರ. ಮನುಷ್ಯ ಮನುಷ್ಯನನ್ನ ಮಾತಾಡಿಸಲು ಹೆದರುವಷ್ಟು; ಸತ್ತರೆ ಮಣ್ಣಿಗೆ ಬರಲು ನಡುಗುವಷ್ಟು. ಮನೆಯಲ್ಲೆ ಕುಳಿತು ಕೈಕಾಲು ಜಡ್ಡುಗಟ್ಟಿತ್ತು. ಈಗ ಮಹಾಮಾರಿ ತಗ್ಗಿದ್ದು, ಬಸ್ಸು ರೈಲು ಮತ್ತೆ ಸುರುವಾಗಿದ್ದ ಸುದ್ದಿ ಬರುತ್ತಿತ್ತು. ತಾಟನ್ನು ಎತ್ತುತ್ತ, 'ಅವ್ವಾ, ನಾಳೆ ಮುಂಜಾನೆ ಶಾಬಾದಿಗೆ ಹೋಗಿ ಬರ್ತೀನಿ. ನೀ ಕೇಳಿದ್ದು ಬೇಶಾತು ನೋಡು' ಅಂದಳು. ಏನೋ ಹೇಳಬೇಕೆಂದಿದ್ದ ಕಾಶವ್ವನ ಬಾಯಿ ಮತ್ತೆ ತಡೆಯಿತು.

ಬೆಳಗ್ಗೆ ಎರಡು ರೊಟ್ಟಿ ಚಹಾ ಮುಗಿಸಿ ಇದ್ದುದರಲ್ಲಿ ಒಂದು ಒಳ್ಳೆ ಸಲ್ವಾರು ಕಮೀಜು ಆರಿಸಿದಳು. ಜೋಳ ತೊಗರಿ ಹೊಲಗಳ ನಡುವಿನ ಕಾಲುದಾರಿಯಲ್ಲಿ ನಡೆಯುತ್ತ ಮಾತಾಡಿಸಿದ ಒಬ್ಬಿಬ್ಬರಿಗೆ ಉತ್ತರ ಕೊಡುತ್ತ ನಡೆದವಳಿಗೆ ಸಿಮೆಂಟ್ ಫ್ಯಾಕ್ಟರಿಯ ಗೇಟು ಹತ್ತಿರವಾಯಿತು. ಆಚೆಕಡೆ ಹಳಿಯಮೇಲೆ ಮುಂಬಯಿ ಚೆನ್ನೈ ರೈಲು ಸೈರನ್ ಬಾರಿಸಿಕೊಂಡು ಸ್ಟೇಶನ್ ಕಡೆ ಓಡಿ ಮರೆಯಾಯಿತು. ಹಳಿಯಮೇಲೆ ನಾಕುಮಾರು ಸಾಗಿದವಳಿಗೆ ಫ್ಯಾಕ್ಟರಿಗೆ ಬರುವ ಒಳಹಾದಿಯ ಲೆವೆಲ್ ಕ್ರಾಸಿಂಗಿನಲ್ಲಿ ದುರುಗಮ್ಮನ ಗುಡಿ ಪೂಜಾರಿ ಶರಣಪ್ಪ ಎದುರಾದ. ಮಾಸಲು ಬಣ್ಣದ ಮಾಸ್ಕ್ ಅವನ ಕೈಯಲ್ಲಿ ನೇತಾಡುತ್ತಿತ್ತು. 'ಓ... ಏನು ಪದ್ಮವ್ವ ಬಜಾರ್ ಕಡಿ ಹೊಂಟೇನವ್ವ?' ಅಂತ ಮಾತಾಡಿಸಿದ. 'ಹೌದ್ ಕಾಕಾ, ನಮ್ ದುಕಾನ ತಗದದಾ ಅಂತ ನೋಡಾಕ ಹೊಂಟೀನಿ' ಅಂದಳು. 'ನಾ ಈಗ ಬಜಾರದಿಂದಾ ಬರಾಕತ್ತೀನಿ. ಕಪಡಾ ದುಕಾನಕ ಇನಾ ಪರಮಿಶನ್ ಕೊಟ್ಟಾಂಗಿಲ್ಲ ಬುಡು. ಯಾಪಾರಿಲ್ದಾ ಆ ಶೇಟ ಇಲ್ಲೇನು ಮಾಡತಾನ... ಊರಿಗಿ ಹೋಗಿರತಾನ' ಕೈ ತಿರುವುತ್ತ ಎರಡು ಹೆಜ್ಜೆ ಮುಂದೆ ಹಾಕಿದವ ಮತ್ತೆ ತಿರುಗಿ, 'ವಳೇ ನಿರ್ಧಾರ ಮಾಡಿದಿ ನೋಡವ್ವ. ದೊಡ್ಡ ವಗತನ ಅವ್ರದ್ದು. ಆಕಡಿ ಎಮ್ಮೀ ನೋಡ್ಬೇಕ... ಆನೀ ತರ ಇರತಾವ, ಇಪ್ಪತ್ ಲೀಟರ ಕರೀತಾವ. ಹಾಲು ಹೈನ... ಕಾಳು ಕಡಿ.. ಉಣಾಕ ಉಡಾಕ ಯಾವುದ್ರ ಕಮೀಯಿರಲ್ಲ' ಪದ್ಮಾವತಿಗೆ ಒಂದೂ ಅರ್ಥವಾಗದೆ ಶರಣಪ್ಪನ ಮುಖವನ್ನೇ ನೋಡಿದಳು. ಅವಳ ಮುಖದಲ್ಲಿಯ ಪ್ರಶ್ನೆಯಿಂದ ತಡವರಿಸಿದ ಶರಣಪ್ಪ, 'ಅಲ್ಲ... ಕಾಶವ್ವ ಎಲ್ಲಾ ಹೇಳತಾಳ ಬುಡು... ಅದೇನೊ ಕೆಲಸಕ್ಕ ಹ್ವಂಟಿದಿ ಹೋಗವ್ವ' ಅಂದವ ಬೀಸುಗಾಲು ಹಾಕಹತ್ತಿದ. ಹಳಿಯಮೇಲೆ ನಾಕು ಹೆಜ್ಜೆ ಹಾಕಿದವಳಿಗೆ ದೂರದ ಸ್ಟೇಶನ್‌ನಲ್ಲಿ ಇನ್ನೂ ನಿಂತ ಚೆನ್ನೈ ಎಕ್ಸ್‌ಪ್ರೆಸ್ ಕಾಣುತ್ತಿತ್ತು. ಶರಣಪ್ಪನ ಮಾತು ಅವಳ ಕಿವಿಯಲ್ಲಿ ಗುಂಯ್‌ಗುಡುತ್ತಿತ್ತು. ಬಜಾರಕ್ಕೆ ಹೋಗುವ ಉತ್ಸಾಹವಿರಲಿಲ್ಲ. ತಿರುಗಿ ಹೆಜ್ಜೆ ಹಾಕತೊಡಗಿದಳು.

ಶಾಬಾದಿಗೆ ಹೋಗಿ ಇಷ್ಟು ಬೇಗ ಬರಲಿಕ್ಕೆ ಸಾಧ್ಯವಿಲ್ಲ ಅಂದುಕೊಳ್ಳುತ್ತಿದ್ದ ಕಾಶವ್ವನಿಗೆ, 'ಅವ್ವ